ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆ: 1226/2025**

ಪಿರ್ಯಾದಿ : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಪ್ರವೀಣ.ಡಿ.ಆರ್,
ವಯಸ್ಸು ಸುಮಾರು 38 ವರ್ಷ,
ಬಿನ್ ರಾಜೇಗೌಡ,
ವಾಸ: ದೇವರಕೇಶಿ ಗ್ರಾಮ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ.

ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., C/C ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

ಸುಮಾರು 4 ವರ್ಷಗಳ ಹಿಂದೆ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಚಟ್ಟನಹಳ್ಳಿ ಗ್ರಾಮದಲ್ಲಿ ಚಾಸಾ1-ಪುನಿತಾ ರವರು ಅದೇ ಗ್ರಾಮದ ಈರೇಗೌಡ ಎಂಬುವವರ ಆರಾಧನಾ ಕಾರ್ಯಕ್ಕೆ ಹೋದಾಗ ಆರೋಪಿಯಾದ ನೀವು ಅವರಿಗೆ ಪರಿಚಯವಾಗಿದ್ದು, ನೀವು ಚಾಸಾ1 ರವರಿಗೆ ದೂರದ ಸಂಬಂಧಿಯಾದ ಕಾರಣ ನೀವು ಚಾಸಾ1 ರವರ ಮೊಬೈಲ್ ನಂಬರ್ ಪಡೆದು ಆಗಾಗ್ಗ ಒಬ್ಬರಿಗೊಬ್ಬರು ದೂರವಾಣಿ ಕರೆ ಮಾಡಿ ಮಾತನಾಡಿ, ಸಂದೇಶ ಕಳುಹಿಸುತ್ತಿದ್ದು, ಹೀಗ್ಗೆ 2 ವರ್ಷಗಳ ಹಿಂದೆ ಚಾಸಾ1 ರವರು ತನ್ನ ತವರೂರಾದ ಸಕಲೇಶಪುರಕ್ಕೆ ಹೋಗಲು ಚಟ್ಟನಹಳ್ಳಿ ಗೇಟ್ ನಲ್ಲಿರುವಾಗ ಆರೋಪಿಯಾದ ನಿಮ್ಮ ಕಾರಿನಲ್ಲಿ ಬಂದು ಚಾಸಾ1 ರವರಿಗೆ ನಾನೂ ಕೂಡ ಸಕಲೇಶಪುರಕ್ಕೆ ಹೋಗುತ್ತಿದ್ದೇನೆ ಬಾ ಎಂದು ಚಾಸಾ1 ರವರನ್ನು ಕೂರಿಸಿಕೊಂಡು ನಿಮ್ಮ ಮೊಬೈಲ್ ನಿಂದ ಚಾಸಾ1 ರವರ ಜೊತೆಯಲ್ಲಿರುವ ಸೆಲ್ಫೀ ಫೋಟೋವನ್ನು ತೆಗೆದುಕೊಂಡು, ನಂತರ ಚಾಸಾ1 ರವರನ್ನು ಸಕಲೇಶಪುರಕ್ಕೆ ಬಿಟ್ಟುಬಂದಿರುತ್ತೀರಿ. ಇದಾದ ಸ್ವಲ್ಪ ದಿನಗಳ ನಂತರ ಚಾಸಾ1 ರವರು ಪುನಃ ಚಟ್ಟನಹಳ್ಳಿ ಗ್ರಾಮದಿಂದ ಸಕಲೇಶಪುರಕ್ಕೆ ಹೋಗಲು ಹೊರಟಾಗ, ಆರೋಪಿಯಾದ ನೀವು ನಿಮ್ಮ ಕಾರಿನಲ್ಲಿ ಚಾಸಾ1 ರವರನ್ನು ಹತ್ತಿಸಿಕೊಂಡು ನಂತರ ಚಾಸಾ1 ರವರ ಜೊತೆಯಲ್ಲಿ ಈ ಹಿಂದೆ ತೆಗೆದುಕೊಂಡಿದ್ದ ಸೆಲ್ಫೀ ಫೋಟೋವನ್ನು ತೋರಿಸಿ ನೀನು ನನ್ನೊಂದಿಗೆ ಸಹಕರಿಸದಿದ್ದರೆ ಈ ಫೋಟೋವನ್ನು ನಿನ್ನ ಗಂಡನಿಗೆ ಕಳುಹಿಸುವುದಾಗಿ ಹೆದರಿಸಿ ಚಾಸಾ1 ರವರಿಗೆ ಮುತ್ತು

ಕೊಟ್ಟಿದ್ದಲ್ಲದೇ, ಆ ಸಮಯದಲ್ಲಿಯೂ ಆರೋಪಿಯಾದ ನೀವು ಸೆಲ್ಫೀ ಫೋಟೋ ತೆಗೆದು, ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ಕಿರುಕುಳ ನೀಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **354A** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**2.** ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು, ಸ್ವಲ್ಪ ದಿನಗಳ ನಂತರ ಆರೋಪಿಯಾದ ನೀವು ಚಾಸಾ1 ರವರಿಗೆ ದೂರವಾಣಿ ಕರೆ ಮಾಡಿ, ನೀನು ನನ್ನೊಂದಿಗೆ ಸಹಕರಿಸದೇ ಇದ್ದರೆ ನಾನು ತೆಗೆದಿರುವ ಸೆಲ್ಫೀ ಫೋಟೋಗಳನ್ನು ನಿನ್ನ ಗಂಡನಿಗೆ ಕಳುಹಿಸಿ ನಿನ್ನ ಸಂಸಾರವನ್ನು ಹಾಳು ಮಾಡುವುದಾಗಿ ಹೆದರಿಸಿ, ನಿನ್ನ ನಗ್ನ ಫೋಟೋಗಳನ್ನು ತೆಗೆದು ಕಳುಹಿಸೆಂದು ಒತ್ತಾಯಿಸಿದ್ದು, ಆಗ ಚಾಸಾ1 ರವರು ಹೆದರಿಕೊಂಡು ತನ್ನ ನಗ್ನ ಫೋಟೋಗಳನ್ನು ತನ್ನ ಮೊಬೈಲ್ ನಲ್ಲಿ ತೆಗೆದು ಆರೋಪಿಯಾದ ನಿಮ್ಮ ಮೊಬೈಲ್ ಗೆ ಕಳುಹಿಸಿದಾಗ, ಅನ್ಯ ಮಹಿಳೆಯಾದ ಚಾಸಾ1 ರವರ ನಗ್ನ ಫೋಟೋಗಳನ್ನು ನೋಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **354C** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**3.** ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು, ಹೀಗ್ಗೆ 4 ತಿಂಗಳ ಹಿಂದೆ ಆರೋಪಿಯಾದ ನೀವು ಚಾಸಾ1 ರವರಿಗೆ ದೂರವಾಣಿ ಕರೆ ಮಾಡಿ, ನಾನು ನಿನ್ನೊಂದಿಗೆ ದೈಹಿಕ ಸಂಪರ್ಕ ನಡೆಸಬೇಕು, ನಾನು ಇನ್ನೂ ಮದುವೆಯಾಗಿಲ್ಲ, ನಿನ್ನ ಗಂಡನನ್ನು ಸಾಯಿಸಿ ನಿನ್ನನ್ನು ಮದುವೆಯಾಗುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **354D** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**4.** ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ1 ರವರಿಗೆ ನಿನ್ನ ಗಂಡನನ್ನು ಸಾಯಿಸಿ ನಿನ್ನನ್ನು ಮದುವೆಯಾಗುತ್ತೇನೆಂದು ತಿಳಿಸಿದ್ದರಿಂದ ಚಾಸಾ1 ರವರು ಹೆದರಿ ನಿಮ್ಮ ಮೊಬೈಲ್ ನಂಬರ್ ಅನ್ನು ಬ್ಲಾಕ್ ಲೀಸ್ಟ್ ಗೆ ಹಾಕಿದ್ದು, ಆದರೂ ಕೂಡ ಆರೋಪಿಯಾದ ನೀವು ಬೇರೆ ಬೇರೆ ಫೋನ್ ನಂಬರ್ ಗಳಿಂದ ಚಾಸಾ1 ರವರಿಗೆ ಕರೆ ಮಾಡಿ ಬ್ಲಾಕ್ ಲೀಸ್ಟ್ ನಿಂದ ನನ್ನ ನಂಬರನ್ನು ತೆಗೆಯದಿದ್ದರೆ ನಿನ್ನ ನಗ್ನ ಫೋಟೋಗಳನ್ನು ನಿನ್ನ ಗಂಡನಿಗೆ ಹಾಗೂ ನಿನ್ನ ಸಂಬಂಧಿಕರಿಗೆ ಕಳುಹಿಸುವುದಾಗಿ ಅನ್ಯ ಮಹಿಳೆಯಾದ ಚಾಸಾ1 ರವರನ್ನು ಪದೇ ಪದೇ ಹಿಂಬಾಲಿಸಿ ಸಂಪರ್ಕಿಸಲು ಪ್ರಯತ್ನಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **506** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

**5.** ಮೇಲೆ ಹೇಳಿದ ಸ್ಥಳದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ1 ರವರು ಆರೋಪಿಯಾದ ನೀವು ನಿಮ್ಮ ನಂಬರ್ ಅನ್ನು ಬ್ಲಾಕ್ ಲೀಸ್ಟ್ ನಿಂದ ತೆಗೆಯದಿದ್ದಕ್ಕೆ ನೀವು ದಿನಾಂಕ 23.07.2023 ರಂದು ಚಾಸಾ1 ರವರ ಅಶ್ಲೀಲ (ನಗ್ನ) ಫೋಟೋಗಳನ್ನು ನಿಮ್ಮ ವಾಟ್ಸಾಪ್ ನಿಂದ ಚಾಸಾ1 ರವರ ಗಂಡನಾದ ಚಾಸಾ2-ಮಲ್ಲೇಶ ರವರ ಮೊಬೈಲ್ ನಂಬರ್ ನ ವಾಟ್ಸಾಪ್ ಗೆ ಹಾಗೂ ಚಾಸಾ1 ರವರ ತಮ್ಮನಾದ ಚಾಸಾ3-ಪ್ರಜ್ವಲ್ ರವರ ಮೊಬೈಲ್ ನಂಬರ್ ನ ವಾಟ್ಸಾಪ್ ಗೆ ಮತ್ತು ಚಾಸಾ4-ಸಾತ್ವಿಕ್ ರವರ ಮೊಬೈಲ್ ನಂಬರ್ ನ ವಾಟ್ಸಾಪ್ ಗೆ ಕಳುಹಿಸಿ ಚಾಸಾ1 ರವರ ಮಾನಕ್ಕೆ ಹಾನಿಯನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಮಾಹಿತಿ ತಂತ್ರಜ್ಞಾನ ಕಲಂ **66(ಇ)** ಮತ್ತು **67(ಎ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ದಿನಾಂಕ 07.03.2026 ರಂದು ದೋಷಾರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ)

**Sd/-**

ಮೂಡಿಗೆರೆ
ದಿನಾಂಕಃ 07.03.2026

C/C ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.